


**ಎಡದಿಂದ ಬಲಕ್ಕೆ**

1. ಮುದುಕನಾದರೂ ಆತ ತಿನ್ನಲೇಬೇಕಂತೆ ಕಡುಬು 3
3. ಹೊಲದ ಕೆಲಸಕ್ಕೆ ಬರಲಿಲ್ಲವೆಂದು ಈ ಜಗಳ 3
4. ಎಲ್ಲವನ್ನೂ ಬಲ್ಲ ವಿದ್ವಾಂಸ ಆಕೆಯ ಗಂಡ 3
6. ಆರ್ತರನ್ನು ರಕ್ಷಿಸುವ ಸೇವೆಯಲ್ಲೇ ಆತ ಮಗ್ನ, ಆಸಕ್ತ 4
7. ಸುಮ್ಮನಾಗು ಎಂದು ಸೂಚಿಸಲು ಈ ಮಂದಹಾಸವೇ? 4
9. ಪರಿತ್ಯಕ್ತರೊಡನೆ ನಡೆದದ್ದು ನೆತ್ತರು ಬೀಳುವಂತಹ ಯುದ್ಧ 4
11. ಅಷ್ಟಾಕ್ಷರ ಬಳಸಿ ರೂಪಿಸಿದ್ದು ಇದೊಂದು ಹೊಸ ಶೋಧ, ನಿರ್ಮಾಣ 4
15. ಕಲ್ಲೇಶನ ಮನೆಯಲ್ಲಿ ಎಲ್ಲೆಲ್ಲೂ ಕಸ, ಕೊಳೆ 3
16. ದೇವಾಲಯವನ್ನಿಡೀ ತೊಳೆದು ಸ್ವಚ್ಛಮಾಡುವುದೇ? 3
17. ನಯವಂಚಕನಾಗಿದ್ದಾನೆ ಆ ಅನ್ಯದೇಶೀಯ 3

**ಮೇಲಿನಿಂದ ಕೆಳಕ್ಕೆ**

1. ಆ ಮಹನೀಯನ ಹೆಸರಿನಲ್ಲೂ ಮನೋಹರ ಸೌಂದರ್ಯ 3
2. ಅವರಿವರ ನಡುವೆ ಒಡಕಿಗೆ ಕಾರಣವಾದದ್ದು ಒಂದು ಮೃದ್ವಂಗಿ ಕವಚ 3
3. ಕೊರತೆಗಳಿರುವವರನ್ನು ಧರೆಗೆ ತಂದದ್ದೂ ಸೃಷ್ಟಿಕರ್ತನೇ ತಾನೇ? 3
5. ಎಲ್ಲಕ್ಕೂಅಬ್ಬರಿಸುವ ಈ ಅಭ್ಯಾಸವನ್ನು ಹೇಗಾದರೂ ಸಹಿಸು 3
6. ಅರೆಬರೆ ಜ್ಞಾನ ಗಳಿಸಿದವನದೇ ಬಹಳ ಜೋರು, ಗದ್ದಲ 3
8. ಗಾಡಿ ಹತ್ತಿ ಬಂದವರಿಗೆ ವಿಶ್ರಾಂತಿ ಒದಗಿಸಲು ಈ ಬಟ್ಟೆ ಮನೆ 3
10. ಪಂಥಕ್ಕೆ ಕರೆದು ಮೋಸದಿಂದ ಸೋಲಿಸಿದ್ದು ಮಹಾ ಪಾಪದ ಕೆಲಸ 3
12. ನವಿಲಿನ ಗರಿಗಳಲ್ಲಿ ಎಲ್ಲ ವರ್ಣಗಳೂ ಬೆರೆತುಹೋಗಿವೆ 3
13. ಎಲ್ಲರಿಗೂ ಆಶ್ಚರ್ಯವಾಗಬೇಕೆಂಬುದೇ ಅವನ ಆಸೆ 3
14. ಸುದ್ದಿ ಏನೆಂದರೆ ಅವರಿಬ್ಬರ ನಡುವೆ ರಾಜಿ ಆಗಿದೆ 3

---

### 10–03–2025 ಉತ್ತರಗಳು

**ಎಡದಿಂದ ಬಲಕ್ಕೆ**

1. ಮೋದಕ 3. ಕಲಹ 4. ವಲ್ಲಭ 6. ಅನುರಕ್ತ 7. ನಸುನಗು 9. ರಕ್ತಪಾತ 11. ಆವಿಷ್ಕಾರ 15. ಕಲ್ಮಶ 16. ಧಾವನ 17. ಯವನ

**ಮೇಲಿನಿಂದ ಕೆಳಕ್ಕೆ**

1. ಮೋಹನ 2. ಕವಡೆ 3. ಕರ್ತಾರ 5. ಭರಿಸು 6. ಅಬ್ಬರ 8. ಗುಡಾರ 10. ಪಾತಕ 12. ವಿಲೀನ 13. ಆಶಯ 14. ಸಂಧಾನ

ಪ್ರಶ್ನಾಂಕಣ

## ಮಾನವ ಪ್ರಭೇದವೊಂದೇ ಉಳಿದಿದೆ ಏಕೆ?

ಮಾನವ ವಂಶಾವಳಿಯಲ್ಲಿ ನಮ್ಮ ಪ್ರಭೇದದ ಎಂದರೆ 'ಹೋಮೊ ಸೇಪಿಯನ್' ಪ್ರಭೇದದ ಅತ್ಯುನ್ನತ ಅಗ್ಗಳಿಕೆ ಏನು ಗೊತ್ತೇ? ಈಗ್ಗೆ ಆರು ದಶಲಕ್ಷ ವರ್ಷ ಹಿಂದಿನಿಂದ ಬಂದಿರುವ ಮಾನವ ವಂಶವೃಕ್ಷದಲ್ಲಿ ನಮ್ಮನ್ನೂ ಸೇರಿಸಿದಂತೆ ಈವರೆಗೆ ಉದ್ಭವಿಸಿರುವ ಒಟ್ಟು ಹದಿನೆಂಟು ಪ್ರಭೇದಗಳಲ್ಲಿ ಉಳಿದು ನಿಂತಿರುವುದು ನಮ್ಮದೊಂದೇ ಪ್ರಭೇದ! ಉಳಿದೆಲ್ಲ ಪ್ರಭೇದಗಳೂ ಸಂಪೂರ್ಣ ಅಳಿದುಹೋಗಿವೆ!

ಧರೆಯಲ್ಲಿ ಅವತರಿಸಿದ ಪ್ರಪ್ರಥಮ ಹೋಮೊ ಪ್ರಭೇದ 'ಹೋಮೊ ಇರೆಕ್ಟಸ್' (ಕೆಲ ಪ್ರಭೇದಗಳು ಚಿತ್ರಗಳಲ್ಲಿವೆ). ಮೂಲತಃ ಆಫ್ರಿಕಾದಲ್ಲಿ ಜನ್ಮತಳೆದ ಈ ಪ್ರಭೇದ ಆಫ್ರಿಕಾವನ್ನೂ ದಾಟಿ ಪೂರ್ವ ಏಷ್ಯಾ ಪ್ರದೇಶಕ್ಕೂ ಹರಡಿತ್ತು. ಹೋಮೊ ಇರೆಕ್ಟಸ್‌ನಿಂದ ಮುಂದೆ ಸಾವಿರಾರು ವರ್ಷಗಳ ಅಂತರಗಳಲ್ಲಿ ಹಲವಾರು ಹೊಸ ಹೊಸ ಹೋಮೊ ಪ್ರಭೇದಗಳು ಹುಟ್ಟಿ ಬಂದುವು: ಹೋಮೊ ಹೈಡೆಲ್ ಬರ್ಗೆನ್ಸಿಸ್, ಹೋಮೊ ನಾಲೆಡಿ, ಹೋಮೊ ಫ್ಲಾರೆಸಿಯೆನ್ಸಿಸ್, ಹೋಮೊ ಲೂಜೋಯೆನ್ಸಿಸ್, ಹೋಮೊ ನಿಯಾಂಡರ್ಥಾಲೆನ್ಸಿಸ್, ಹೋಮೊ ಡೆನಿಸೋವಿಯೆನ್ಸಿಸ್ ಇತ್ಯಾದಿ. ಹೋಮೊ ಪ್ರಭೇದಗಳ ಈ ವಂಶಾವಳಿಯಲ್ಲಿ ಅತ್ಯಂತ ಈಚಿನದೇ ನಮ್ಮ ಪ್ರಭೇದ ಹೋಮೊ ಸೇಪಿಯನ್ಸ್.

ಸುಮಾರು ಮೂರು ಲಕ್ಷ ವರ್ಷ ಹಿಂದಿನ ಸುಮಾರಿಗೆ ಹೋಮೊ ಸೇಪಿಯನ್ನರೂ ಸೇರಿದಂತೆ ಕನಿಷ್ಠ ಒಂಬತ್ತು ಹೋಮೋ ಪ್ರಭೇದಗಳು ಆಫ್ರಿಕಾ, ಏಷ್ಯಾ ಮತ್ತು ಯೂರೋಪ್‌ನ ವಿವಿಧ ಪ್ರದೇಶಗಳಲ್ಲಿ ನೆಲೆಸಿದ್ದುವು. ಏಕೋ ಏನೋ, ಹೋಮೊ ಸೇಪಿಯನ್‌ರನ್ನು ಬಿಟ್ಟು ಉಳಿದೆಲ್ಲ ಪ್ರಭೇದಗಳೂ ಒಂದೊಂದಾಗಿ ಅಳಿದುಹೋದುವು. ವಿಸ್ಮಯ ಏನೆಂದರೆ, ನಿಯಾಂಡರ್ ಥಾಲ್ ಮತ್ತು ಡೆನಿಸೋವನ್ ಪ್ರಭೇದಗಳು ಹೋಮೊ ಸೇಪಿಯನ್‌ಗಳ ಜೊತೆ ಜೊತೆಗೇ ಬೆರೆತು ಸಾವಿರಾರು ವರ್ಷ ಜೀವಿಸಿದುವಾದರೂ ಅವೂ ಕಣ್ಮರೆಯಾದುವು. ಹಾಗೆಲ್ಲ ಆಗಿ ಸುಮಾರು ನಲವತ್ತು ಸಾವಿರ ವರ್ಷ ಹಿಂದಿನ ವೇಳೆಗೆ ಧರೆಯಲ್ಲಿ ಉಳಿದಿದ್ದು ನಮ್ಮದೊಂದೇ ಪ್ರಭೇದ. ಪ್ರಸ್ತುತ ಭೂಮಿಯಲ್ಲಿ ಕಿಕ್ಕಿರಿದಿರುವುದೂ ಇದೊಂದೇ ಪ್ರಭೇದ!

ಹೀಗೆ ಮಾನವ ವಂಶಾವಳಿಯ ಎಲ್ಲ ಪ್ರಭೇದಗಳೂ ಅಳಿದು ನಮ್ಮ ಪ್ರಭೇದ ಮಾತ್ರವೇ ಉಳಿದಿರುವುದು ಹೇಗೆ? ಅದಕ್ಕೆ ಎರಡು ಪ್ರಧಾನ ಅನನ್ಯ ಕಾರಣಗಳಿವೆ: ದೊಡ್ಡದಾದ ಮೆದುಳು ಮತ್ತು ಸಹಕಾರದಿಂದ ಕೂಡಿದ ಜೀವನ ಕ್ರಮ. ಸಕಲ ಹೋಮೊ ಪ್ರಭೇದಗಳಲ್ಲೂ ಹೋಮೊ ಸೇಪಿಯನ್‌ಗಳದೇ ಅತ್ಯಂತ ದೊಡ್ಡ ಗಾತ್ರದ ಮೆದುಳು; ಅದರಿಂದಾಗಿ ಉತ್ತಮ ಬುದ್ಧಿವಂತಿಕೆ. ತತ್ಪರಿಣಾಮವಾಗಿ ಅದ್ಭುತ ಹಸ್ತ ಕೌಶಲ್ಯಗಳನ್ನು ಬಳಸಿ, ಸಮರ್ಥ ಆಯುಧಗಳನ್ನು ತಯಾರಿಸಿ, ಉತ್ತಮ ಬೇಟೆ ತಂತ್ರಗಳನ್ನು ರೂಪಿಸಿ, ಬೆಂಕಿಯ ಬಳಕೆಯನ್ನೂ ಸೇರಿಸಿ ಎಲ್ಲ ಪರಿಸರಗಳಿಗೂ ಹೊಂದಿಕೊಳ್ಳಬಲ್ಲ ಶಕ್ತಿಯನ್ನೂ ಗಳಿಸಿದ ಹೋಮೊ ಸೇಪಿಯನ್‌ಗಳು ಉತ್ತಮ ಸಹಕಾರದ ಗುಂಪು ಜೀವನವನ್ನೂ ಕಲಿತು ಯಶಸ್ವೀ ಜೀವನ ನಡೆಸುತ್ತ ಉಳಿದು ಬಂದಿವೆ!




■ ಎನ್. ವಾಸುದೇವ್